ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

3

ಇಲಾಖೆ / ವಿಷಯ : DEPARTMENT / SUBJECT: ಕೆಪಿಎಸ್ಸಿ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 10/4/2021

## ಪ್ರಶ್ನೆಗಳಲ್ಲಿ ಗೊಂದಲವಿಲ್ಲದಿದ್ದರೂ 7 ಗ್ರೇಸ್ ಅಂಕ ನೀಡಿದ ಕೆಪಿಎಸ್ಸಿ

### ಅರ್ಹರಿಗೆ ಅನ್ಯಾಯ, ಕನ್ನಡ ಭಾಷಾ ವಿಷಯದಲ್ಲಿಯೇ ಎಡವಟ್ಟು

# ಎಫ್‌ಡಿಎ ಕೀ ಉತ್ತರ ಪ್ರಮಾದ

■ **ವಿಕ ಸುದ್ದಿಲೋಕ** ಬೆಂಗಳೂರು

ಪ್ರಥಮ ದರ್ಜೆ ಸಹಾಯಕರ (ಎಫ್‌ಡಿಎ) ನೇಮಕಕ್ಕೆ ಇತ್ತೀಚೆಗೆ ನಡೆಸಿದ ಪರೀಕ್ಷೆಯ ಅಂತಿಮ ಕೀ ಉತ್ತರಗಳನ್ನು ಕರ್ನಾಟಕ ಲೋಕಸೇವಾ ಆಯೋಗ ಪ್ರಕಟಿಸಿದೆ.



ಇದರಲ್ಲೂ ಹಲವು ತಪ್ಪುಗಳಾಗಿವೆ ಎಂಬ ಆಕ್ರೋಶ ಕೇಳಿ ಬಂದಿದೆ.

ಆಯೋಗ ಏಪ್ರಿಲ್ 8ರಂದು ಪ್ರಕಟಿಸಿದ ಕನ್ನಡ ಭಾಷೆ ಮತ್ತು ಸಾಮಾನ್ಯ ಜ್ಞಾನದ ಅಂತಿಮ ಕೀ ಉತ್ತರದಲ್ಲಿ ಸುಮಾರು 15 ತಪ್ಪುಗಳಾಗಿವೆ ಎಂದು ಅರ್ಹ ಅಭ್ಯರ್ಥಿಗಳು ದೂರಿದ್ದು, ಈ ಸಂಬಂಧ ಆಯೋಗಕ್ಕೂ ಶುಕ್ರವಾರ ದೂರು ದಾಖಲಿಸಿದ್ದಾರೆ.

975 ಹುದ್ದೆ ಭರ್ತಿಗೆ ನಡೆಸಿದ ಪರೀಕ್ಷೆಯ ಕೀ ಉತ್ತರಗಳನ್ನು ಮಾ. 2ರಂದು ಪ್ರಕಟಿಸಿ, ಆಕ್ಷೇಪಣೆ ಸಲ್ಲಿಸಲು ಮಾ. 10ರವರೆಗೆ ಅವಕಾಶ ಕಲ್ಪಿಸಲಾಗಿತ್ತು. ಆನಂತರ ಬಂದ ಆಕ್ಷೇಪಣೆಗಳನ್ನು ಪರಿಗಣಿಸಿ ಇದೀಗ ಪ್ರಕಟಿಸಿರುವ ಅಂತಿಮ ಕೀ ಉತ್ತರದಲ್ಲೂ ತಪ್ಪುಗಳು ನುಸುಳಿರುವುದು ಅಭ್ಯರ್ಥಿಗಳನ್ನು ಆತಂಕಕ್ಕೀಡು ಮಾಡಿದೆ.

**ಸರಳ ಪ್ರಶ್ನೆಗಳಿಗೆ ಗ್ರೇಸ್:** ಅದಕ್ಕೂ ಮುಖ್ಯವಾಗಿ ಯಾವುದೇ ಗೊಂದಲ ಇಲ್ಲದೇ ಇದ್ದರೂ ಸರಳ ಪ್ರಶ್ನೆಗಳಿಗೆ ಕನ್ನಡದಲ್ಲಿ ಆರು ಮತ್ತು ಸಾಮಾನ್ಯಜ್ಞಾನ ವಿಷಯದಲ್ಲಿ ಒಂದು ಗ್ರೇಸ್ ಅಂಕಗಳನ್ನು ನೀಡಲಾಗಿದೆ. ಇದರಿಂದಾಗಿ ಅರ್ಹರಿಗೆ ಅನ್ಯಾಯವಾಗುತ್ತಿದೆ ಎಂದು ಅಭ್ಯರ್ಥಿಗಳು ದೂರಿದ್ದಾರೆ.

ವಿಷಯ ತಜ್ಞರ ಬೇಜವಾಬ್ದಾರಿತನ ಮತ್ತು ನಿರ್ಲಕ್ಷ್ಯ ಕೂಡ ಎದ್ದು ಕಾಣುತ್ತಿದೆ ಎಂದು ಅಭ್ಯರ್ಥಿಗಳು ದೂರಿದ್ದು, ಈ ಕುರಿತು ಕೆಪಿಎಸ್‌ಸಿ ಕಾರ್ಯದರ್ಶಿಗೆ ಮನವಿಯನ್ನೂ ಸಲ್ಲಿಸಿದ್ದಾರೆ.

''ಎಫ್‌ಡಿಎ ಪರೀಕ್ಷೆಗೆ ಮೊದಲು ಬಿಡುಗಡೆ ಮಾಡಿದ್ದ ಕೀ-ಉತ್ತರಗಳು ಬಹುತೇಕ ಸರಿ ಇದ್ದವು. ಆದರೆ ಆಕ್ಷೇಪಣೆ ಪರಿಶೀಲನೆ ವೇಳೆ ಅದೇನಾಗಿದೆಯೋ ಏನೋ ಅಂತಿಮ ಕೀ ಉತ್ತರದಲ್ಲಿ ತಪ್ಪುಗಳಾಗಿವೆ. ನಿಯಮದಂತೆ ಇದರ ವಿರುದ್ಧ ಆಕ್ಷೇಪಣೆ ಸಲ್ಲಿಕೆಗೆ ಅವಕಾಶವಿಲ್ಲ, ಹಾಗೆಂದು ಸುಮ್ಮನಿದ್ದರೆ ಅರ್ಹ ಅಭ್ಯರ್ಥಿಗಳಿಗೆ ನ್ಯಾಯವಾಗುತ್ತದೆ,'' ಎಂದು ಅಭ್ಯರ್ಥಿಯೊಬ್ಬರು 'ವಿಕ' ಬಳಿ ಅಳಲು ತೋಡಿಕೊಂಡರು.

> ಕೆಪಿಎಸ್ಸಿ ಇದೀಗ ಬಿಡುಗಡೆ ಮಾಡಿರುವ ಕನ್ನಡ ಭಾಷೆ ಮತ್ತು ಸಾಮಾನ್ಯ ಜ್ಞಾನ ಎರಡೂ ಪತ್ರಿಕೆಗಳ ಕೀ-ಉತ್ತರಗಳಲ್ಲಿ ಸಾಕಷ್ಟು ತಪ್ಪುಗಳಿವೆ. ಇದರಿಂದ ಅರ್ಹ ಅಭ್ಯರ್ಥಿಗಳಿಗೆ ಅನ್ಯಾಯವಾಗಲಿದೆ. ಇದು ಆಯೋಗದ ಬೇಜವಾಬ್ದಾರಿತನಕ್ಕೆ ಹಿಡಿದ ಕೈಗನ್ನಡಿಯಾಗಿದೆ.
>
> **- ನೊಂದ ಅಭ್ಯರ್ಥಿಗಳು**

> ಆಕ್ಷೇಪಣೆಗಳನ್ನು ಪರಿಶೀಲಿಸಿ ವಿಷಯ ತಜ್ಞರ ಸಮಿತಿ ಅಂತಿಮ ಕೀ ಉತ್ತರ ಸಿದ್ಧಪಡಿಸುತ್ತದೆ. ಆದರಲ್ಲೂ ತಪ್ಪುಗಳಾಗಿವೆ, ಹೆಚ್ಚಿನ ಗ್ರೇಸ್ ಮಾರ್ಕ್ಸ್ ನೀಡಲಾಗಿದೆ ಎಂಬ ಆರೋಪಗಳ ಬಗ್ಗೆ ಪರೀಕ್ಷಾ ವಿಭಾಗದವರ ಜತೆ ಚರ್ಚೆ ನಡೆಸಿ ಪರಿಶೀಲಿಸುತ್ತೇನೆ.
>
> **- ಜಿ. ಸತ್ಯವತಿ,** ಕಾರ್ಯದರ್ಶಿ, ಕೆಪಿಎಸ್‌ಸಿ

**ದೋಷರಹಿತ ಪರೀಕ್ಷೆ ಅಗತ್ಯ**
**ಸಂಪಾದಕೀಯ**

### ಪ್ರಮಾದಗಳ ಉದಾಹರಣೆ

- 'ಮೆಲ್ಲಮೆಲ್ಲಗೆ .....' ಕ್ರಿಯಾ ವಿಶೇಷಣ ಎಂಬ ಪ್ರಶ್ನೆ ಕೇಳಲಾಗಿದೆ. ಇದಕ್ಕೆ ಸರಿಯಾದ ಉತ್ತರ ರೀತಿ ವಾಚಕ. ಆದರೆ ಕೆಪಿಎಸ್ಸಿ ಪ್ರಕಟಿಸಿರುವ ಅಂತಿಮ ಕೀ ಉತ್ತರದಲ್ಲಿ ಅನುಕರಣಾ ವಾಚಕ ಎಂದು ನೀಡಿದ್ದಾರೆ. (ಅನುಕರಣಾ ವಾಚಕ ಪದಗಳಿಗೆ ಅರ್ಥವಿರುವುದಿಲ್ಲ, ಉದಾಹರಣೆ ದಬದಬ, ಸರಸರ ಇತ್ಯಾದಿ)
- ಸುಲಿದ ಬಾಳೆಯ ಹಣ್ಣಿನಂದದಿ ಎಂಬುದು ........ಅಲಂಕಾರ ಎಂಬ ಪ್ರಶ್ನೆ ಕೇಳಲಾಗಿದೆ. ಇದಕ್ಕೆ ಸರಿ ಉತ್ತರ ಉಪಮಾಲಂಕಾರ. ಆದರೆ ಆಯೋಗ ರೂಪಕ ಅಲಂಕಾರ ಎಂದು ತಪ್ಪಾಗಿ ಪ್ರಕಟಿಸಿದೆ.
- ಬೆಂಗಳೂರು ಸಾಬೂನು ಕಾರ್ಖಾನೆ ಸ್ಥಾಪಿಸಿದ್ದು ಯಾರು ಎಂಬ ಪ್ರಶ್ನೆಗೆ ಮಿರ್ಜಾ ಇಸ್ಮಾಯಿಲ್ ಎಂದು ಉತ್ತರಿಸಲಾಗಿದೆ. ಆದರೆ ಸರಿ ಉತ್ತರ ಸರ್ ಎಂ.ವಿಶ್ವೇಶ್ವರಯ್ಯ.
- ಅಂತೆಯೇ ಕನ್ನಡದಲ್ಲಿ ಎಷ್ಟು ವಿಭಕ್ತಿ ಪ್ರತ್ಯಯಗಳು ಎಂಬ ಪ್ರಶ್ನೆಗೆ ತಪ್ಪು ಉತ್ತರ ನೀಡಿದ್ದಾರೆ.
- ನಿಷೇಧಾರ್ಥಕ ರೂಪ ಕುರಿತಾದ ಪ್ರಶ್ನೆಗಳಲ್ಲೂ ಗೊಂದಲ ಮೂಡಿಸುವ ಉತ್ತರ ನೀಡಿದ್ದಾರೆ.
- ಅಟಾರ್ನಿ ಜನರಲ್ ಯಾರು ಎಂಬ ಪ್ರಶ್ನೆಯ ಕುರಿತು ತಪ್ಪು ಮಾಹಿತಿ ನೀಡಲಾಗಿದೆ.